# ರಿಚರ್ಡ್ –ದಿ ಗ್ರೇಟ್

ಸಾಹಸ ಎನ್ನುವುದೊಂದು ಹುಚ್ಚು. ನಿಜವಾದ ಸಾಹಸಿಗಳಿಗೆ ತಡೆ ಒಡ್ಡಲು ಜಗತ್ತಿನ ಪ್ರಬಲ ಶಕ್ತಿಗಳಿಗೂ ಸಾಧ್ಯವಿಲ್ಲ. ಬ್ರಿಟನ್ನಿನ ಕೋಟ್ಯಾಧಿಪತಿ ಉದ್ಯಮಿ ರಿಚರ್ಡ್ ಬ್ರಾನ್ಸನ್ ಇದಕ್ಕೊಂದು ಇತ್ತೀಚಿನ ಸಾಕ್ಷಿ. ಬಾಹ್ಯಾಕಾಶಕ್ಕೆ ಪ್ರಯಾಣಿಕರನ್ನು ಕರೆದೊಯ್ಯುವ ಈತನ ಮಹತ್ವಾಕಾಂಕ್ಷೆಯ ವಾಣಿಜ್ಯ ಯೋಜನೆಗೆ ಮೊದಲ ವಿಘ್ನ ಎದುರಾಗಿದ್ದರೂ ಈತ ಎದೆಗುಂದಿಲ್ಲ. 'ಯೋಜನೆ ನಿಲ್ಲುವುದಿಲ್ಲ. ಮೊದಲು ನಾನು ಮತ್ತು ನನ್ನ ಕುಟುಂಬದವರು ಪ್ರಯಾಣಿಸುತ್ತೇವೆ. ಆ ಬಳಿಕವೇ ಸಾರ್ವಜನಿಕರನ್ನು ಕರೆದೊಯ್ಯುತ್ತೇನೆ' ಎಂದಿದ್ದಾನೆ ರಿಚರ್ಡ್– ದಿ ಗ್ರೇಟ್!

ರಿಚರ್ಡ್ ಬ್ರಾನ್ಸನ್‌ನ ಕಂಪೆನಿ ವರ್ಜಿನ್ ಅಟ್ಲಾಂಟಿಕ್ ಏರ್‌ವೇಸ್ ಲಿಮಿಟೆಡ್, ವಾಣಿಜ್ಯ ಉದ್ದೇಶದ ಅಂತರಿಕ್ಷ ಯಾನದ ಬಗ್ಗೆ ಕಳೆದ 2–3 ವರ್ಷಗಳಿಂದಲೂ ದೊಡ್ಡ ಧ್ವನಿಯಲ್ಲಿ ಮಾತನಾಡುತ್ತಿದೆ. ಅದಕ್ಕಾಗಿಯೇ ವರ್ಜಿನ್ ಗ್ಯಾಲಕ್ಟಿಕ್ ಎಂಬ ಹೊಸ ಕಂಪೆನಿ ಶುರುವಾಗಿದೆ. ಭೂಮಿಯ ಮೇಲೆ ಆಗಸದತ್ತ ಹೋದಂತೆ ಸುಮಾರು 25 ಕಿ.ಮೀ ದಾಟಿದರೆ ನಿರ್ವಾತ ಪ್ರದೇಶವಿದೆ. ಈ ಗಡಿಯನ್ನು ವಾಯುಮಂಡಲದ ಅಂಚು ಎನ್ನಬಹುದು. ವಾಯುಮಂಡಲದ ಅಂಚನ್ನು ದಾಟಿ ಅಂತರಿಕ್ಷದಲ್ಲಿ ಜನರನ್ನು ಒಂದು ಸುತ್ತು ಹೊಡೆಸಿ ವಾಪಸ್ ಕರೆತರುವುದು ರಿಚರ್ಡ್ ಬ್ರಾನ್ಸನ್‌ನ ಯೋಜನೆ. '3,60,000 ಅಡಿ ಎತ್ತರಕ್ಕೆ ಕೇವಲ ಆರು ನಿಮಿಷಗಳಲ್ಲಿ ಚಿಮ್ಮಲಿರುವ ಈ ಅಂತರಿಕ್ಷ ನೌಕೆ, ನಿರ್ವಾತದಲ್ಲಿ ಸುತ್ತು ಹೊಡೆಯಲಿದೆ. ಮರುಬಳಸಬಹುದಾದ ಈ ಬಾಹ್ಯಾಕಾಶ ನೌಕೆಯ ಮೊದಲ ಪ್ರಯಾಣ 2015ರ ಫೆಬ್ರುವರಿಯಲ್ಲಿ' ಎಂದು ರಿಚರ್ಡ್ ಪ್ರಕಟಿಸಿ ವರ್ಷವೇ ಕಳೆದಿದೆ.

ಈ ಪ್ರಯಾಣದ ಹೋಗಿಬರುವ ಟಿಕೆಟ್ ವೆಚ್ಚ ಒಬ್ಬರಿಗೆ 2,50,000 ಡಾಲರ್. ರಿಚರ್ಡ್‌ನ ಪ್ರಚಾರ ಎಷ್ಟು ಜೋರಾಗಿದೆಯೆಂದರೆ ಈಗಾಗಲೆ 800 ಜನ ಟಿಕೆಟ್ ಬುಕ್ ಮಾಡಿದ್ದಾರೆ. ಅವರಲ್ಲಿ ಹಾಲಿವುಡ್‌ನ ಪ್ರಖ್ಯಾತರಾದ ಲಿಯೊನಾರ್ಡೊ ಡಿಕ್ಯಾಪ್ರಿಯೊ, ಡೆಮಿ ಮೂರ್ ಮುಂತಾದವರೂ ಒಳಗೊಂಡಿದ್ದಾರೆ! 'ನಾನು ಮತ್ತು ನನ್ನ ಮಗ ಇಬ್ಬರೂ ಮೊದಲ ಯಾನದಲ್ಲಿ ಇರುತ್ತೇವೆ' ಎಂದಿದ್ದಾನೆ ಬ್ರಾನ್ಸನ್.

ಆದರೆ ಈಗ ಮೊದಲ ಚುಂಬನದಲ್ಲೇ ಒಂದು ದಂತ ಭಗ್ನಗೊಂಡಿದೆ. ಈ ಪ್ರಯಾಣದ ಮೊದಲ ಪರೀಕ್ಷಾರ್ಥ ಹಾರಾಟ ಅಕ್ಟೋಬರ್ 31ರಂದು ನಡೆಯಿತು. 'ಸ್ಪೇಸ್‌ಶಿಪ್ ಟೂ' ಎಂಬ ಹೆಸರಿನ ನೌಕೆ ಆಕಾಶಕ್ಕೆ ಚಿಮ್ಮಿದ ಕೆಲವೇ ಕ್ಷಣಗಳಲ್ಲಿ ಸಿಡಿದು ಬೆಂಕಿ ಹತ್ತಿ ಭೂಮಿಗೆ ಬಿತ್ತು. ಅದರಲ್ಲಿದ್ದ ಸಹಪೈಲಟ್ ಸತ್ತುಹೋದ. 'ಸ್ಫೋಟಗೊಂಡು ಭೂಮಿಗೆ ಬಿದ್ದಿದೆ' ಎನ್ನುವುದು ಮಾಧ್ಯಮಗಳ ವರದಿ. ಆದರೆ ರಿಚರ್ಡ್ ಬ್ರಾನ್ಸನ್ ಅದನ್ನು ಒಪ್ಪುವುದಿಲ್ಲ. 'ಸ್ಫೋಟ ಆಗಿಲ್ಲ. ಕ್ಯಾಲಿಫೋರ್ನಿಯಾದ ಮೊಜಾತಿ ಮರಳುಗಾಡಿನಲ್ಲಿ ಬಿದ್ದ ನೌಕೆಯ ಅವಶೇಷಗಳನ್ನು ಪತ್ತೆ ಹಚ್ಚಲಾಗಿದೆ. ಇಂಧನ ಟ್ಯಾಂಕ್ ಮತ್ತು ಎಂಜಿನ್ ಹಾಗೆಯೇ ಇದೆ, ಭಗ್ನಗೊಂಡಿಲ್ಲ. ಅಪಘಾತಕ್ಕೆ ಕಾರಣ ಏನು ಎನ್ನುವುದನ್ನು ಪತ್ತೆ ಹಚ್ಚಿ, ಸರಿ ಪಡಿಸಿ ಮತ್ತೆ ಪರೀಕ್ಷಾರ್ಥ ಉಡ್ಡಯನ ನಡೆಸಲಾಗುವುದು' ಎಂದಿದ್ದಾನೆ ಬ್ರಾನ್ಸನ್.

ಈ ಅಪಘಾತದಿಂದಾಗಿ ಆತನ ಉದ್ಯಮ ಸಾಮ್ರಾಜ್ಯದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿದೆ ಎನ್ನುವುದಂತೂ ನಿಜ. ಹಲವು ಹೂಡಿಕೆದಾರರು ರಿಚರ್ಡ್‌ನ ಹುಚ್ಚಾಟಗಳ ಬಗ್ಗೆ ಗೊಣಗಲು ತೊಡಗಿದ್ದಾರೆ. ಈತನ ಒಡೆತನದ ವರ್ಜಿನ್ ಗ್ರೂಪ್‌ನಲ್ಲಿ ಒಟ್ಟು 400 ಕಂಪೆನಿಗಳಿವೆ. ಅವುಗಳಲ್ಲಿ ಕೆಲವು ಬಾಗಿಲು ಮುಚ್ಚಿವೆ, ಕೆಲವು ಸಖತ್ತಾಗಿ ದುಡ್ಡು ಮಾಡುತ್ತಿವೆ. ಕ್ಯಾಸಿನೋ, ಬ್ಯಾಂಕ್‌ಗಳು, ಜಿಮ್, ಫೋನ್ ನೆಟ್‌ವರ್ಕ್, ನಿವೃತ್ತರ ಆರೈಕೆ ಯೋಜನೆ, ಹೈಸ್ಪೀಡ್ ರೈಲು, ಪುಸ್ತಕ ಪ್ರಕಟಣೆ, ಬ್ರೈಡಲ್ ಸ್ಟೋರ್, ಮೆಗಾಸ್ಟೋರ್, ಕೋಲಾ ಕಂಪೆನಿ– ಹೀಗೆ ಈತ ಕೈಹಾಕದ ಉದ್ಯಮಗಳೇ ಇಲ್ಲ ಎನ್ನಬಹುದು! ಈತನ ವಿಮಾನ ಕಂಪೆನಿಯಂತೂ ಬ್ರಿಟಿಶ್ ಏರ್‌ವೇಸ್‌ಗೇ ಸಡ್ಡು ಹೊಡೆದು ದುಡ್ಡು ಮಾಡುತ್ತಿದೆ. ಹಾಗಿರುವಾಗ ಒಂದು ಸಣ್ಣ ಅವಘಡವೂ ಉದ್ಯಮದ ಹಿತಾಸಕ್ತಿಗಳನ್ನು ಚಿಂದಿ ಮಾಡಬಹುದು ಎನ್ನುವ ಅಂದಾಜಿನಲ್ಲಿ ಸತ್ಯಾಂಶವೂ ಇದೆ.

64ರ ಹರೆಯದ ರಿಚರ್ಡ್ ಮಾತ್ರ ಇದ್ಯಾವುದಕ್ಕೂ 'ಕ್ಯಾರೇ' ಎಂದಿಲ್ಲ. 'ಸಾಹಸ ಎಂದ ಮೇಲೆ ಅಪಾಯ ಇದ್ದೇ ಇದೆ. ನನಗೇನೂ ಇದು ಹೊಸತಲ್ಲ' ಎಂದಿದ್ದಾನೆ. ಸ್ವತಃ ಸಾಹಸಗಳನ್ನು ಮಾಡುವುದು ಆತನ ದೊಡ್ಡ ಖಯಾಲಿ. ಸ್ಪೀಡ್‌ಬೋಟ್‌ನಲ್ಲಿ ಪಯಣಿಸುವುದು, ಬಿಸಿಗಾಳಿಯ ಬಲೂನ್‌ನಲ್ಲಿ ಹಾರಾಡುವುದು, ಅತಿವೇಗದ ಕಾರ್ ರೇಸ್‌ಗಳಲ್ಲಿ ಭಾಗವಹಿಸುವುದು ಎಲ್ಲವನ್ನೂ ಈತ ಮಾಡಿದ್ದಾನೆ. 1998ರಲ್ಲೊಮ್ಮೆ ಈತ ಹಾರಾಡುತ್ತಿದ್ದ ಬಿಸಿಹವೆಯ ಬಲೂನ್ ಕಡಿಮೆ ಒತ್ತಡದಿಂದಾಗಿ ಶಾಂತಸಾಗರದಲ್ಲಿ ಬಿದ್ದು ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಬಚಾವಾಗಿದ್ದ. ಸದ್ಯಕ್ಕಂತೂ ಎಲ್ಲ ಸಾಹಸಪ್ರಿಯರು ಕುತೂಹಲ ಮಾತ್ರವಲ್ಲ, ಆತಂಕದೊಂದಿಗೇ ಈತನ ಮೇಲೆ ಕಣ್ಣು ನೆಟ್ಟಿದ್ದಾರೆ. ಈತನ ಸ್ಪೇಸ್‌ಶಿಪ್ ಮತ್ತೆ ಮೇಲೆದ್ದು ಚಿಮ್ಮಿ, ಎರಡನೇ ಪರೀಕ್ಷೆಯಲ್ಲಿ ಪಾಸಾಗಲಿದೆಯೆ ಎನ್ನುವುದೀಗ ಬಿಲಿಯನ್ ಡಾಲರ್ ಪ್ರಶ್ನೆ!



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65